ದಿನಾಂಕ 16-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಾದಿಯ ಪರ ಶ್ರೀ ಹೆಚ್.ಎನ್ ವಕೀಲರಿಂದಃ**

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನೋಡಿ ಗುರುತಿಸುತ್ತೇನೆ.

| | |
|---|---|
| ನಿ.ಪಿ-9 ರಿಂದ 11 | ಆಧಾರ್ ಕಾರ್ಡಗಳ ನೋಟರೈಸ್ಡ ಪ್ರತಿಗಳು |

ಆದ್ದರಿಂದ ಡಿಕ್ರಿಯನ್ನು ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಎಲ್.ಬಿ ವಕೀಲರಿಂದಃ**

ನಾನು ಖಾಯಂ ಆಗಿ ಬೆಂಗಳೂರಿನಲ್ಲಿ ವಾಸವಿದ್ದೇನೆ ಎಂದರೆ ಸರಿ. ನಾನು ಎಸ್. ಎಸ್ ಎಲ್ ಸಿ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ದೇವಸ್ಥಾನದಲ್ಲಿ ಅಥವಾ ಸಬ್ ರಿಜಿಸ್ಟಾರ್ ಕಛೇರಿಯಲ್ಲಿ ನೋಂದಣಿ ಮೂಲಕ ಮದುವೆ ಆಗಿರುತ್ತೇನೆಯೇ ಎಂದರೆ ಮನೆಯಲ್ಲಿ ಮದುವೆ ಆಗಿರುತ್ತೇನೆ. ಬಸವರಾಜ ರವರ ತಂದೆಯ ಹೆಸರು ಕನ್ನಪ್ಪ ಚಿಕ್ಕಣ್ಣನವರ. ನಮ್ಮ ಮದುವೆಯ ಸಮಯದಲ್ಲಿ ಅವರ ಮನೆಯ ಹಿರಿಯರಿಗೆ ತಿಳಿಸಿರುತ್ತೇವೆ. ಆ ಸಮಯದಲ್ಲಿ ಭಾವ ಚಿತ್ರಗಳನ್ನು ತೆಗೆಸಿಕೊಂಡಿರುತ್ತೇವೆ. ಅವುಗಳ ಲಭ್ಯ ಇರುವ ಬಗ್ಗೆ ನನಗೆ ಗೊತ್ತಿಲ್ಲ.

2. 1 ನೇ ಪ್ರತಿವಾದಿಯು ಬಸವರಾಜ ರವರ ಹೆಂಡತಿ ಎಂದರೆ ಸರಿ. ಅವರಿಗೆ 2 ಮತ್ತು 3 ನೇ ಪ್ರತಿವಾದಿ ಮಕ್ಕಳುಗಳು ಎಂದರೆ ಸರಿ. ಮದುವೆ ಆಗುವ ಸಮಯದಲ್ಲಿ

ಬಸವರಾಜ ರವರಿಗೆ ಮೊದಲ ಹೆಂಡತಿ ಇರುವ ಬಗ್ಗೆ ನನಗೆ ಗೊತ್ತಿರಲಿಲ್ಲ, ನಂತರದಲ್ಲಿ ನನಗೆ ಗೊತ್ತಾಗಿರುತ್ತದೆ. ಬಸವರಾಜ ರವರು 1 ರಿಂದ 3 ನೇ ಪ್ರತಿವಾದಿಗಳ ಜೊತೆಯಲ್ಲಿ ಶ್ಯಾಡಗುಪ್ಪಿ ಗ್ರಾಮದಲ್ಲಿ ವಾಸ ಇದ್ದಾರೆ ಎಂದರೆ ಸರಿ. ನಾನು ಬಸವರಾಜ ರವರ ಜೊತೆಯಲ್ಲಿ ಮದುವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಕ್ಕಳ ಜನ್ಮ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ, ಅವರ ಆಧಾರ ಕಾರ್ಡಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಹಾಗೂ ನನ್ನ ಮಕ್ಕಳ ಆಧಾರ ಕಾರ್ಡಗಳಲ್ಲಿ ಬಸವರಾಜ ಚಿಕ್ಕಣ್ಣನವರ ಎಂಬ ಹೆಸರು ಬರೆಸಿರುವುದಿಲ್ಲ ಎಂದರೆ ಸರಿ.

3. ನಾನಾಗಲೀ ನನ್ನ ಮಕ್ಕಳಾಗಲೀ ಬಸವರಾಜ ಚಿಕ್ಕಣ್ಣನವರ ಕುಟುಂಬಕ್ಕೆ ಸಂಬಂಧಿಸಿದವರು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಅವರನ್ನು ಮದುವೆ ಆಗಿರುತ್ತೇನೆ ಎನ್ನುತ್ತಾರೆ. ಬಸವರಾಜ ಚಿಕ್ಕಣ್ಣನವರವರಿಗೆ ಮೊದಲನೇ ಹೆಂಡತಿ ಹಾಗೂ ಮಕ್ಕಳು ಇದ್ದರೂ ಸಹ ನಾನು ಕಾನೂನು ಬಾಹಿರವಾಗಿ ಅವರ ಜೊತೆಯಲ್ಲಿ ಮದುವೆ ಆಗಿರುತ್ತೇನೆ ಎಂದರೆ ನಾನು ಮದುವೆ ಆಗುವ ಸಮಯದಲ್ಲಿ ಈ ಬಗ್ಗೆ ನನಗೆ ಗೊತ್ತಿರಲಿಲ್ಲ, ನಂತರದಲ್ಲಿ ನನಗೆ ಗೊತ್ತಾಗಿರುತ್ತದೆ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯವರ ತವರು ಮನೆಯ ಆಸ್ತಿಗಳು ಇದ್ದು, ಅವುಗಳು ಬಸವರಾಜ ಚಿಕ್ಕಣ್ಣನವರವರಿಗೆ ಸಂಬಂದಿಸಿದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎನ್ನುತ್ತಾರೆ.

4. 1 ನೇ ಪ್ರತಿವಾದಿಯವರ ಅಜ್ಜಿಯ ಹೆಸರು ಶ್ರೀಮತಿ ನೀಲವ್ವ. ಸ ನಂಃ 7/2 ಬ ಕ್ಷೇತ್ರ 1 ಎಕರೆ 20 ಗುಂಟೆ ಜಮೀನು 1 ನೇ ಪ್ರತಿವಾದಿಗೆ ಶ್ರೀಮತಿ ನೀಲವ್ವ ಸಣ್ಣಬಸಪ್ಪ ಚಿಕ್ಕಣ್ಣನರವರಿಂದ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಸ ನಂಃ 86/2 ಅ-1



ಕ್ಷೇತ್ರ 1 ಎಕರೆ 20 ಗುಂಟೆ ಜಮೀನು 1 ನೇ ಪ್ರತಿವಾದಿಗೆ ಅವರ ತವರು ಮನೆಯಿಂದ ಬಂದಂತಹ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸ ನಂಃ 86/2 ಅ-1 ರ ಎಂ ಆರ್ ಸಂಃ1724 ಇರುತ್ತದೆ ಎಂದರೆ ಸರಿ. ಸ ನಂಃ 7/2 ಬ ರ ಎಂ ಆರ್ ಸಂಃ1501 ಇರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು 1 ನೇ ಪ್ರತಿವಾದಿಗೆ ಹೇಗೆ ಬಂದಿರುತ್ತವೆ ಎಂಬ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ದಾವಾ

ಆಸ್ತಿಗಳು ಬಸವರಾಜ ಚಿಕ್ಕಣ್ಣನವರ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸದರಿ ಆಸ್ತಿಗಳು ನನ್ನ ಮಾವ ಆಸ್ತಿಗಳಾಗಿರುತ್ತವೆ.

5. ದಾವಾ ಸ್ವತ್ತುಗಳು ಕನ್ನಪ್ಪ ಆಗಲೀ, ಬಸವರಾಜ ಚಿಕ್ಕಣ್ಣನರವರ ಆಸ್ತಿಗಳಾಗಿರುವುದಿಲ್ಲ, ಅವುಗಳು 1 ನೇ ಪ್ರತಿವಾದಿಯವರ ತವರು ಮನೆಯ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ನಾವು ಬಸವರಾಜ ಚಿಕ್ಕಣ್ಣರವರ ಹೆಂಡತಿ ಮತ್ತು ಮಕ್ಕಳು ಆಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗಾಗಲೀ, 2 ಹಾಗೂ 3 ನೇ ವಾದಿಗಳಿಗಾಗಲೀ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ಹಾಗೂ 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಇರುವ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮೇಲೆ 1 ನೇ ಪ್ರತಿವಾದಿ ಯವರನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಆಗಿರುತ್ತವೆ ಎಂಬ ಬಗ್ಗೆ ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

6. 3 ದಾವಾ ಸ್ವತ್ತುಗಳ ಚಕ್ಕುಬಂದಿಗಳು ನನಗೆ ಗೊತ್ತಿಲ್ಲ. ನಾವು ಬಸವರಾಜ ಚಿಕ್ಕಣ್ಣನವರ ಕುಟುಂಬಕ್ಕೆ ಹಾಗೂ ದಾವಾ ಆಸ್ತಿಗಳಿಗೆ ಯಾವುದೇ ಸಂಬಂಧ ಇಲ್ಲದೇ



ಇರುವುದರಿಂದ ದಾವಾ ಆಸ್ತಿಗಳು ಎಲ್ಲಿ ಹಾಗೂ ಹೇಗೆ ಅವರ ಕುಟುಂಬಕ್ಕೆ ಬಂದಿರುತ್ತವೆ ಎಂಬ ಬಗ್ಗೆ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು

ಒಪ್ಪಿರುತ್ತಾರೆ.

SD/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ